# ಮುರುಘಾಶ್ರೀ ಮ್ಯೂಸಿಯಂ ಲೋಕಾರ್ಪಣೆ

**ಚಿತ್ರದುರ್ಗ ನ. 29** - ರಾಜ್ಯದ ನೆಲ, ಜಲ, ಹವಾಮಾನ, ಸಂಪತ್ತು ಆದಿಯಾಗಿ ಅದೆಷ್ಟು ಶ್ರೀಮಂತವಾಗಿದೆಯೋ ಅಷ್ಟೇ ಶ್ರೀಮಂತಿಕೆ ಅಧ್ಯಾತ್ಮ, ಧರ್ಮ, ಸಂಸ್ಕøತಿಗಳಲ್ಲೂ ಇದೆ. ಇಲ್ಲಿನ ಮಠ-ಮಾನ್ಯಗಳು ನಾಡಿನ ಸರ್ವಾಂಗೀಣ ಅಭಿವೃದ್ಧಿಗೆ ಕಾರಣವಾಗಿರುವುದು ಸ್ತುತ್ಯಾರ್ಹ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರು ಹೇಳಿದರು.

ನಗರದ ಶ್ರೀ ಮುರುಘರಾಜೇಂದ್ರ ಮಠದಲ್ಲಿ ಆಯೋಜಿಸಲಾಗಿದ್ದ ಮುರುಘಾಶ್ರೀ ಪ್ರಾಚ್ಯವಸ್ತು ಸಂಗ್ರಹಾಲಯ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ವಸ್ತುಸಂಗ್ರಹಾಲಯವನ್ನು ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು. ಚಿತ್ರದುರ್ಗ ಇಂದು ಎಲ್ಲರ ಗಮನಸೆಳೆದಿರುವುದು ಪೂಜ್ಯ ಡಾ. ಶಿವಮೂರ್ತಿ ಮುರುಘಾ ಶರಣರ ಸೇವೆಯಿಂದಾಗಿ. ಹನ್ನೆರಡನೇ ಶತಮಾನದಲ್ಲಿ ಬಸವಾದಿ ಶರಣರು ಹಾಕಿಕೊಟ್ಟ ಮಾರ್ಗದಲ್ಲಿ ಈ ಸಮಾಜವನ್ನು ಮುನ್ನಡೆಸುತ್ತಿರುವ, ಸಮಾಜದ ಎಲ್ಲ ವರ್ಗದವರನ್ನು ಅದರಲ್ಲಿಯೂ ಶೋಷಿತರ, ದೀನ-ದಲಿತರ ಪಾಲಿಗೆ ನಿಜವಾಗಿಯೂ ಬೆಳಕಾಗಿರುವ ಶ್ರೀಗಳು, ಮಠವನ್ನು ಒಂದು ವರ್ಗದ ಮಠವನ್ನಾಗಿಸದೇ ಸಮಾಜದ ಎಲ್ಲ ವರ್ಗದವರ, ಜಾತ್ಯತೀತ ಮಠವನ್ನಾಗಿ ಪರಿವರ್ತಿಸಿದ್ದಾರೆ. ಮೇಲು-ಕೀಳು ಎನ್ನದೆ ಸರ್ವಜನಾಂಗದವರೊಂದಿಗೆ ಬೆರೆತು ಕೈಗೊಂಡಿರುವ ಕೆಲಸ ಅಪೂರ್ವವಾದುದು, ಅಷ್ಟೇ ಮಾನವೀಯವಾದುದು. ಈ ಮೂಲಕವಾಗಿ ಸರ್ವ ಜನಾಂಗದವರ ಮಧ್ಯೆ ಸಾಮರಸ್ಯ - ಸಮಾನತೆ ಖಂಡಿತವಾಗಿಯೂ ನೆಲೆಗೊಳ್ಳುತ್ತದೆ. ಶ್ರೀಗಳ ಹಲವು ವರ್ಷಗಳ ಕನಸಿನ ಕೂಸಾದ ಮುರುಘಾಶ್ರೀ ಮ್ಯೂಸಿಯಂನ್ನು ಇಂದು ರಾಷ್ಟ್ರಕ್ಕೆ ಲೋಕಾರ್ಪಣೆ ಮಾಡಿದ್ದು ನನಗೆ ಅತ್ಯಂತ ಸಂತಸವೆನಿಸಿದೆ. 50 ಸಾವಿರಕ್ಕು ಹೆಚ್ಚು ಸಂಗ್ರಹಗಳು ಮ್ಯೂಸಿಯಂನಲ್ಲಿರುವುದು ಅಭಿಮಾನದ ಸಂಗತಿ ಎಂದರು.

ಅಧ್ಯಕ್ಷತೆ ವಹಿಸಿದ್ದ ಡಾ. ಶಿವಮೂರ್ತಿ ಮುರುಘಾ ಶರಣರು ಮಾತನಾಡಿ, ಮ್ಯೂಸಿಯಂ ಸಾರ್ವಜನಿಕರ ವೀಕ್ಷಣೆಗೆ ತೆರೆದುಕೊಂಡಿದೆ. ಮಾನವ ಸಂಗ್ರಹದ ಬುದ್ಧಿ ಬೆಳೆಸಿಕೊಳ್ಳುತ್ತಾನೆ. ಯಾವುದೇ ಲೋಹವನ್ನು ಬ್ಯಾಂಕಿನಲ್ಲಿ ಇಟ್ಟರೆ ನಿಧಿ ಎನಿಸುತ್ತದೆ ಅಥವಾ ಮೈಮೇಲೆ ಧರಿಸಿಕೊಂಡರೆ ಆಭರಣ ಅನಿಸಿಕೊಳ್ಳುತ್ತದೆ. ಆದರೆ ಅದನ್ನು ಮ್ಯೂಸಿಯಂನಲ್ಲಿ ಇಟ್ಟರೆ ಆಕರ್ಷಣೀಯ ವಸ್ತು ಎನಿಸಿಕೊಳ್ಳುತ್ತದೆ. ಹಾಗಾಗಿ ಪ್ರಾಚ್ಯವಸ್ತುಗಳನ್ನು ಸಂಗ್ರಹಿಸುವ ಹವ್ಯಾಸ ಬೆಳೆಸಿಕೊಳ್ಳಬೇಕು. ಪ್ರಾಚ್ಯವಸ್ತು ಸಂಗ್ರಹಿಸುವ ಹವ್ಯಾಸ ಇದೆ. ಅನುಭಾವ ಸಂಗ್ರಹ ಇದೆ. 12ನೇ ಶತಮಾನದಲ್ಲಿ ಬಸವಾದಿ ಶರಣರು ಅನುಭವ ಮಂಟಪ ಕಟ್ಟಿ ಅನುಭಾವಕ್ಕಾಗಿ ಹಾತೊರೆದರು. ಅಲ್ಲಿದ್ದ 770 ಅಮರಗಣಂಗಳು ಅನುಭಾವಕ್ಕಾಗಿ ಹಂಬಲಿಸಿದರು. ಅದೇರೀತಿ ಲೋಕಸಂಗ್ರಹ ಅಂದರೆ ಜನಸಂಗ್ರಹ. ಎಲ್ಲ ದಾರ್ಶನಿಕರು ಲೋಕಸಂಗ್ರಹ ಕಾರ್ಯಕ್ಕೆ ಮುಂದಾದರು. ಬಸವಣ್ಣನವರು ಲೋಕಸಂಗ್ರಹ ಮಾಡಿ ನಮಗೆ ಸ್ಫೂರ್ತಿಯಾಗಿದ್ದಾರೆ ಎಂದು ನುಡಿದರು.

ಮುಖ್ಯಮಂತ್ರಿಗಳಿಗೆ ಸ್ಟಾರ್ ವ್ಯಾಲ್ಯು ಇದೆ. ಫೇಸ್ ವ್ಯಾಲ್ಯೂ ಇದೆ. ಯುವಕರಲ್ಲಿ ವೃದ್ಧರನ್ನು ನೋಡಬಹುದು. ಆದರೆ ವೃದ್ಧರಲ್ಲಿ ಯುವಕರೆಂದರೆ ಬಿ.ಎಸ್.ಯಡಿಯರೂಪ್ಪನವರು. ಸಮಗ್ರ ಕರ್ನಾಟಕದ ಅಭಿವೃದ್ಧಿಗೆ ಬದ್ಧರಾದವರು. ಬರದ ನಾಡಿಗೆ ಖ್ಯಾತಿಯಾಗಿರುವ ಚಿತ್ರದುರ್ಗ ಜಿಲ್ಲೆಯನ್ನು ಕಲ್ಯಾಣ ಕರ್ನಾಟಕ ಭಾಗಕ್ಕೆ ಸೇರಿಸುವುದು ಸೂಕ್ತ. ಲಿಂಗಾಯತ ವೀರಶೈವ ಜನಾಂಗಕ್ಕೆ ಓಬಿಸಿ ಮೀಸಲಾತಿ ಕೊಡಬೇಕೆನ್ನುವ ಮುಖ್ಯಮಂತ್ರಿಗಳ ನಿರ್ಧಾರದಿಂದ ದೊಡ್ಡ ಸಂತೋಷವಾಗಿದೆ ಎಂದರಲ್ಲದೆ, ನಿಮ್ಮ ಜೊತೆ ನಾವಿzÀ್ದೇವೆ ಎಂಬ ಗಟ್ಟಿಮಾತನ್ನು ಮುಖ್ಯಮಂತ್ರಿಗಳಿಗೆ ಹೇಳಿದರು.

ವೇದಿಕೆಯಲ್ಲಿ ಬೋವಿ ಗುರುಪೀಠದ ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಮಹಾಸ್ವಾಮಿಗಳು, ಮಾದಾರಚೆನ್ನಯ್ಯ ಗುರುಪೀಠದ ಶ್ರೀ ಬಸವಮೂರ್ತಿ ಮಾದಾರಚೆನ್ನಯ್ಯ ಮಹಾಸ್ವಾಮಿಗಳು, ಜಿ.ಪಂ. ಅಧ್ಯಕ್ಷೆ ಶ್ರೀಮತಿ ಶಶಿಕಲಾ ಸುರೇಶ್‌ಬಾಬು, ಶಾಸಕರುಗಳಾದ ಜಿ.ಹೆಚ್.ತಿಪ್ಪಾರೆಡ್ಡಿ, ಎಂ.ಚಂದ್ರಪ್ಪ, ಟಿ. ರಘುಮೂರ್ತಿ, ಗೂಳಿಹಟ್ಟಿ ಡಿ.ಶೇಖರ್, ಶ್ರೀಮತಿ ಪೂರ್ಣಿಮಾ ಶ್ರೀನಿವಾಸ್, ಜಿಲ್ಲಾಧಿಕಾರಿ ಶ್ರೀಮತಿ ಕವಿತಾ ಮನ್ನಿಕೇರಿ, ಜಿಲ್ಲಾ ಪೊಲೀಸ್ ರಕ್ಷಣಾಧಿಕಾರಿ ಶ್ರೀಮತಿ ಜಿ. ರಾಧಿಕ, ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಹಣಾಧಿಕಾರಿ ಟಿ.ಯೋಗೇಶ್ ಮತ್ತು ವೀರಶೈವ ಸಮಾಜದ ಅಧ್ಯಕ್ಷ ಎನ್. ಜಯಣ್ಣ ಇದ್ದರು.

ಇದೇ ಸಂದರ್ಭದಲ್ಲಿ ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಿ.ಎಸ್. ಪರಮಶಿವಯ್ಯ, ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೊರೇಷನ್ ಲಿಮಿಟೆಡ್‌ನ ಅಧ್ಯಕ್ಷ ಎಸ್. ಲಿಂಗಮೂರ್ತಿ, ಮುರುಘಾಶ್ರೀ ಮ್ಯೂಸಿಯಂನ ಕ್ಯುರೇಟರ್ ಶಂಕರ ಎಸ್.ಅಥಣಿ ಮತ್ತು ಕಲಾ ಸಂರಕ್ಷಣಾಕಾರ ಶರಣಪ್ಪ ಎಂ.ಬಾರಂಗಿ ಅವರನ್ನು ಸನ್ಮಾನಿಸಲಾಯಿತು.

ಜಮುರಾ ಕಲಾವಿದರು ಪ್ರಾರ್ಥಿಸಿದರು. ಹರ್ತಿಕೋಟೆ ವೀರೇಂದ್ರಸಿಂಹ ಸ್ವಾಗತಿಸಿದರು. ಎಸ್.ಜೆ.ಎಂ. ವಿದ್ಯಾಪೀಠದ ಕಾರ್ಯದರ್ಶಿ ಎ.ಜೆ.ಪರಮಶಿವಯ್ಯ ವಂದಿಸಿದರು. ಶ್ರೀಮತಿ ನೇತ್ರಾವತಿ ಕಾರ್ಯಕ್ರಮ ನಿರೂಪಿಸಿದರು.












॥ ಶ್ರೀ ಗುರು ಬಸವಲಿಂಗಾಯನಮಃ ॥
ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠ
ಚಿತ್ರದುರ್ಗ-577501
ಪ್ರಾಚ್ಯವಸ್ತು ಸಂಗ್ರಹಾಲಯ ಲೋಕಾರ್ಪಣೆ
ಉತ್ತರ ದಿಕ್ಕಿನ ಶಿಲಾಮಂಟಪದ ಉದ್ಘಾಟನೆ
(ರಾಷ್ಟ್ರೀಯ ಹೆದ್ದಾರಿಗೆ ಅಭಿಮುಖವಾಗಿ ನಿರ್ಮಿಸಲಾದ)
ದಿನಾಂಕ : 29-11-2020ನೇ ಭಾನುವಾರ ಬೆಳಗ್ಗೆ 10.00ಗಂಟೆಗೆ
ಸ್ಥಳ : ಅನುಭವ ಮಂಟಪ, ಶ್ರೀ ಮುರುಘಾಮಠ, ಚಿತ್ರದುರ್ಗ


॥ ಶ್ರೀ ಗುರು ಬಸವಲಿಂಗಾಯನಮಃ ॥
ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠ
ಚಿತ್ರದುರ್ಗ-577501
'ಮುರುಘಾಶ್ರೀ' ಪ್ರಾಚ್ಯವಸ್ತು ಸಂಗ್ರಹಾಲಯ ಲೋಕಾರ್ಪಣೆ
ಹಾಗೂ ಉತ್ತರ ದಿಕ್ಕಿನ ಶಿಲಾಮಂಟಪದ ಉದ್ಘಾಟನೆ
(ರಾಷ್ಟ್ರೀಯ ಹೆದ್ದಾರಿಗೆ ಅಭಿಮುಖವಾಗಿ ನಿರ್ಮಿಸಲಾದ)


॥ ಶ್ರೀ ಗುರು ಬಸವಲಿಂಗಾಯನಮಃ ॥
ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠ
ಚಿತ್ರದುರ್ಗ-577501
'ಮುರುಘಾಶ್ರೀ' ಪ್ರಾಚ್ಯವಸ್ತು ಸಂಗ್ರಹಾಲಯ ಲೋಕಾರ್ಪಣೆ
ಹಾಗೂ ಉತ್ತರ ದಿಕ್ಕಿನ ಶಿಲಾಮಂಟಪದ ಉದ್ಘಾಟನೆ
(ರಾಷ್ಟ್ರೀಯ ಹೆದ್ದಾರಿಗೆ ಅಭಿಮುಖವಾಗಿ ನಿರ್ಮಿಸಲಾದ)
ದಿನಾಂಕ : 29-11-2020ನೇ ಭಾನುವಾರ ಬೆಳಗ್ಗೆ 10.00ಗಂಟೆಗೆ
ಸ್ಥಳ : ಅನುಭವ ಮಂಟಪ, ಶ್ರೀ ಮುರುಘಾಮಠ, ಚಿತ್ರದುರ್ಗ

